ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Issue-4, January - February 2026, Pp. 84-92
©*IIMRD*, Mysuru
IIMRD JOURNALS
www.iimrd.com

# ದಲಿತ ಮಹಿಳೆಯರ ವಿರುದ್ಧ ಹೆಚ್ಚುತ್ತಿರುವ ಅಪರಾಧಗಳು

**ಡಾ. ಪಾರ್ವತಮ್ಮ ವಿ**
ಉಪನ್ಯಾಸಕರು, ರಾಜ್ಯಶಾಸ್ತ್ರ ವಿಭಾಗ, ಎಸ್.ಎಸ್.ಎ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು (ಸ್ವಾಯತ್ತ.) ಬಳ್ಳಾರಿ

**ಸಾರಾಂಶ: (Abstract)**

*ಭಾರತದಲ್ಲಿ ವೈವಿಧ್ಯಮಯ ಸಂಸ್ಕೃತಿ, ವಿಭಿನ್ನ ಧರ್ಮಗಳು, ಅನೇಕ ಜಾತಿಗಳು ಮತ್ತು ಭಾಷೆಗಳನ್ನು ಹೊಂದಿರುವುದರಿಂದ ಇಲ್ಲಿಯ ಸ್ತ್ರೀಯರ ಸ್ಥಾನಮಾನಗಳು ಕ್ಲಿಷ್ಟಕರವಾದುದು. ಸಾಮಾಜಿಕ ವ್ಯವಸ್ಥೆಯಲ್ಲಿ ಪ್ರತಿಯೊಂದು ಸ್ಥಾನಮಾನವು ವಿಭಿನ್ನ ಪಾತ್ರವನ್ನು ಬಿಂಬಿಸುತ್ತದೆ. ಮನುಷ್ಯ ಸಮಾಜದ ವಿಕಾಸದೊದಿಗೆ ಕಾಲದಿಂದ ಕಾಲಕ್ಕೆ ನಡೆದ ಸಾಮಾಜಿಕ, ರಾಜಕೀಯ, ಧಾರ್ಮಿಕ ಸ್ಥಿತ್ಯಂತರಗಳ ಜೊತೆ ಜೊತೆಗೆ ಪುರುಷ–ಸ್ತ್ರೀ ಸಂಬಂಧಗಳಲ್ಲಿಯೂ ವ್ಯತ್ಯಾಸಗಳು ಕಂಡುಬಂದವು. ಶೋಷಣೆ ನಡೆದದ್ದು, ನಡೆಯುತ್ತಿರುವುದನ್ನು ನೋಡಿದಾಗ ಈ ಶೋಷಣೆ ಎನ್ನುವುದು ಮನುಷ್ಯ ಸಮಾಜದ ಅಸ್ತಿತ್ವದ ಅವಿಚ್ಛಿನ್ನ ಭಾಗವಾಗಿದೆ. ಇಂದಿನ ವೈಜ್ಞಾನಿಕ ಪ್ರಗತಿ, ಶೈಕ್ಷಣಿಕ ವಿಕಾಸ, ಸಾಮಾಜಿಕ ಎಚ್ಚರ, ರಾಜಕೀಯ ಅರಿವು, ಸಂವಿಧಾನಾತ್ಮಕ ಹಕ್ಕುಗಳ ಅರಿವು ಇವೆಲ್ಲದರ ನಡುವೆಯೂ ಸ್ತ್ರೀ–ಪುರುಷಾದಿಯಾಗಿ ವರ್ಗ, ಜಾತಿ, ಲಿಂಗ, ತಾರತಮ್ಯಗಳಿಂದಾಗಿ ನಿರಂತರ ಶೋಷಣೆಗೆ, ದೌರ್ಜನ್ಯಕ್ಕೆ, ದಬ್ಬಾಳಿಕೆಗೆ ಒಳಗಾಗುತ್ತಲೇ ಇದ್ದಾರೆ.*

**ಮುಖ್ಯಪದಗಳು (Keywords):** *ಸಾಮಾಜಿಕ ವ್ಯವಸ್ಥೆ, ದಲಿತರ ಸ್ಥಿತಿಗತಿ, ದಲಿತ ಮಹಿಳೆ, ದೌರ್ಜನ್ಯ, ಅಪರಾಧ.*

### ಪೀಠಿಕೆ

ಇತ್ತೀಚಿನ ದಿನಗಳಲ್ಲಿ ಶೈಕ್ಷಣಿಕ, ವೈಜ್ಞಾನಿಕತೆ ಮತ್ತು ನಾಗರಿಕತೆಯಲ್ಲಾಗಿರುವ ಪ್ರಗತಿಯ ಹೊರತಾಗಿಯೂ ದಲಿತ ಮಹಿಳೆಯರ ವಿರುದ್ಧ ಅಪರಾಧಗಳು ಹೆಚ್ಚುತ್ತಿವೆ. ದಲಿತ ಮಹಿಳೆಯರ ಮೇಲಿನ ದೌರ್ಜನ್ಯಗಳು ಆತಂಕಕಾರಿ ಪ್ರಮಾಣ ಮುಟ್ಟಿದೆ. ಅಪರಾಧಿಗಳಿಗೆ ಸರಿಯಾದ ಶಿಕ್ಷೆಯು ಸಿಗುತ್ತಿಲ್ಲ. ಬಹುತೇಕ ಪ್ರಕರಣಗಳಲ್ಲಿ ಅಪರಾಧಿಗಳು ನುಣುಚಿಕೊಂಡು ಹೊಗುತ್ತಿದ್ದಾರೆ. ಹೀಗಾಗಿ ಶಿಕ್ಷೆ ಅನುಭವಿಸುವ ಭಯ ಇಲ್ಲದ ಕಾರಣ ಅಪರಾಧಗಳು ಇನ್ನೂ ಹೆಚ್ಚುತ್ತಲೇ ಇವೆ.[1] ಆರು ಪ್ರಕಾರವಾದ ಅಪರಾಧಗಳಲ್ಲಿ ಅಪರಾಧ ಪ್ರವೃತ್ತಿ ಮತ್ತು ದರಗಳ ಬಗ್ಗೆ ಎನ್.ಸಿ.ಆರ್.ಬಿ.(ರಾಷ್ಟ್ರೀಯ ಅಪರಾಧ ದಾಖಲೆ ಸಂಸ್ಥೆ)ಯು 1995, 1996, ಮತ್ತು 1997ರ ವರ್ಷಗಳಲ್ಲಿ ನಡೆಸಿದ ಅಪರಾಧ ವರದಿಗಳನ್ನು ಅವಲೋಕನ ಮಾಡಿದಾಗ, ಈ ಮೂರು ವರ್ಷಗಳ ಅವಧಿಯಲ್ಲಿ ಮಧ್ಯಪ್ರದೇಶ, ಮಹಾರಾಷ್ಟ್ರಗಳಲ್ಲಿ ದಾಖಲಾದ ಅಪರಾಧ ಕ್ರಮವಾಗಿ 5.9 ಲಕ್ಷ ಮತ್ತು 5.5 ಲಕ್ಷಕ್ಕೆ ಹೆಚ್ಚಾಗಿದ್ದವು. ಉತ್ತರಪ್ರದೇಶ, ರಾಜಸ್ಥಾನ, ತಮಿಳುನಾಡು ರಾಜ್ಯಗಳಲ್ಲಿ 4ರಿಂದ 5

*Please cite this article as:* ಪಾರ್ವತಮ್ಮ, ವಿ. (2026). ದಲಿತ ಮಹಿಳೆಯರ ವಿರುದ್ಧ ಹೆಚ್ಚುತ್ತಿರುವ ಅಪರಾಧಗಳು. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(4). ಪು.ಸಂ.* 84–92

ಲಕ್ಷದವರೆವಿಗೂ ಹಾಗೂ ಗುಜರಾತ್, ಬಿಹಾರ್, ಕರ್ನಾಟಕ ಮತ್ತು ಆಂಧ್ರಪ್ರದೇಶ ರಾಜ್ಯಗಳಲ್ಲಿ 3 ಲಕ್ಷ, ಹಾಗೂ ಕೇರಳ, ಪಶ್ಚಿಮ ಬಂಗಾಳದಲ್ಲಿ 2 ಲಕ್ಷಕ್ಕೂ ಹೆಚ್ಚು ಅಪರಾಧಗಳು ದಾಖಲಿಸಲಾಯಿತು. ದೇಶದ ರಾಜಧಾನಿ ದೆಹಲಿ ಒಂದರಲ್ಲಿ ದಾಖಲಾದ 1.65 ಲಕ್ಷಕ್ಕಿಂತ ಹೆಚ್ಚು ಅಪರಾಧಗಳು ಒರಿಸ್ಸಾ, ಅಸ್ಸಾಂ, ಹರಿಯಾಣ ಇದೇ ಇತ್ಯಾದಿ ರಾಜ್ಯಗಳಲ್ಲಿ ದಾಖಲಾದ ಅಪರಾಧಗಳ ಸಂಖ್ಯೆಗಿಂತ ಹೆಚ್ಚು. ಆದರೆ ಸರಾಸರಿ ವಾರ್ಷಿಕ ಅಪರಾಧ ದರದಲ್ಲಿ ದೆಹಲಿ ದೇಶದಲ್ಲಿ ಪ್ರಥಮ ಸ್ಥಾನದಲ್ಲಿದೆ. ಪ್ರತಿಕೋಟಿ ಜನಸಂಖ್ಯೆಗೆ ಅಲ್ಲ ಅಪರಾಧಗಳ ಸರಾಸರಿ ದರ 48,517 ಎಂದಾದರೆ, ರಾಜಸ್ಥಾನಗಳಲ್ಲಿ 32,000 ಇದ್ದು ಎರಡನೇ ಸ್ಥಾನದಲ್ಲಿದೆ. ಕರ್ನಾಟಕ, ತಮಿಳುನಾಡು ಮತ್ತು ಮಹಾರಾಷ್ಟ್ರಗಳಲ್ಲಿ ದಾಖಲಾದ ಅಪರಾಧ ದರ 20,000 ರಿಂದ 23,000ಈ ರೀತಿಯ ಹೆಚ್ಚು ದರ ಅಪರಾಧಕ್ಕೆ ಮುಖ್ಯ ಕಾರಣವೆಂದರೆ ದೊಡ್ಡ ಪ್ರಮಾಣದ ವಲಸೆ ಮತ್ತು ಅದರಿಂದುಂಟಾದ ಜನಸಂಖ್ಯೆ ಹೆಚ್ಚಳವಾಗಿದೆ.[2] ಹೀಗೆ ದಲಿತ ಮಹಿಳೆಯರ ಮೇಲೆ ಅಪರಾಧ ಪ್ರಕರಣಗಳು ಹೆಚ್ಚಾಗುತ್ತಿವೆಯೇ ಹೊರತು ಕಡಿಮೆಯಾಗುವಂತಹವುಗಳನ್ನು ಕಾಣುತ್ತಿಲ್ಲ.

ಇತ್ತೀಚಿನ ದಿನಗಳಲ್ಲಿ ಭಾರತ ಜಾತಿ ತಾರತಮ್ಯವನ್ನು ಕಾನೂನುಬಾಹಿರ ಎಂದು 1947ರಲ್ಲೆ ಹೇಳಿದೆ. ಆದರೂ ಸ್ವತಂತ್ರ ಭಾರತದಲ್ಲಿ ಜಾತಿ ಆಧಾರಿತ ತಾರತಮ್ಯಕ್ಕೆ ಮತ್ತು ದೌರ್ಜನ್ಯಕ್ಕೆ ಕೊನೆಯಿಲ್ಲ. ಕೊರೋನ ಎಂಬ ಮಹಾಮಾರಿ ಸಾಲು ಸಾಲು ಹೆಣಗಳನ್ನು ಬೀಳಿಸುತ್ತಿದೆ ಚಿತಾಗಾರಗಳಲ್ಲಿ, ಸ್ಮಶಾನಗಳಲ್ಲಿ ಅಂತ್ಯಸಂಸ್ಕಾರಕ್ಕೆ ಜಾಗವಿಲ್ಲದೆ ಹೌಸ್ ಫುಲ್ ಎಂದು ಬೋರ್ಡ್ ಸಹ ಇಟ್ಟಿರುವ ಪ್ರಸಂಗಗಳು ನಡೆಯುತ್ತಿವೆ. ಆದರೂ ಜನ ತನ್ನ ಸರಿಸಮಾನ ಮನುಷ್ಯನನ್ನು ಶೋಷಿಸುವುದನ್ನು ಬಿಟ್ಟಿಲ್ಲ ಅಂದರೆ ಜಾತಿ ಎಂಬುದು ಎಷ್ಟು ದೊಡ್ಡ ಮಾನಸಿಕ ಕಾಯಿಲೆ ಇರಬಹುದು. ಜಾತಿಯನ್ನು ಹೋಗಲಾಡಿಸಲು ವಿವಿಧ ಕಾರ್ಯಕ್ರಮಗಳು, ವಿವಿಧ ಯೋಜನೆ, ನೀತಿಗಳಿಂದ ಯಾವುದೇ ರೀತಿಯ ದೊಡ್ಡ ಮಟ್ಟದಲ್ಲಿ ಬದಲಾವಣೆಗಳು ಕಾಣುತ್ತಿಲ್ಲ.

**ದಲಿತ ಮಹಿಳೆಯರ ವಿರುಧ ಅಪರಾಧದ ಪ್ರಕರಣಗಳು**

- 1997ರಲ್ಲಿ ಪತ್ತೆಯಾಗದೆ ಬಾಕಿಯಾದ ಪ್ರಕರಣಗಳ ಸಂಖ್ಯೆ–1,48,000
- 1997ರಲ್ಲಿ ಪತ್ತೆ ಕೆಲಸ ಪೂರ್ಣಗೊಳಿಸಿದ ಪ್ರಕರಣಗಳ ಸಂಖ್ಯೆ–1,16,000
- 1–1–1997ರಲ್ಲಿ ನ್ಯಾಯಾಲಯಗಳಲ್ಲಿ ಇತ್ಯರ್ಥವಾಗದೆ ಬಾಕಿಯಾದ ಪ್ರಕರಣಗಳ ಸಂಖ್ಯೆ–2.7ಲಕ್ಷ
- 1997ರಲ್ಲಿ ನ್ಯಾಯಾಲಯಗಳಲ್ಲಿ ಇತ್ಯರ್ಥಗೊಂಡ ಪ್ರಕರಣಗಳ ಸಂಖ್ಯೆ– 0.75ಲಕ್ಷ
- 1997ರಲ್ಲಿ ಹೊಸದಾಗಿ ಸೇರಿಕೆಯಾದ ಪ್ರಕರಣಗಳ ಸಂಖ್ಯೆ–1.00 ಲಕ್ಷ
- 1–1–1998ರಲ್ಲಿ ಪತ್ತೆಯಾಗದೇ ಬಾಕಿ ಉಳಿದ ಪ್ರಕರಣಗಳ ಸಂಖ್ಯೆ–32,000
- 1–1–1998 ರಲ್ಲಿ ನ್ಯಾಯಾಲಯಗಳಲ್ಲಿ ಇತ್ಯರ್ಥವಾಗದೇ ಬಾಕಿಯಾದ ಪ್ರಕರಣಗಳ ಸಂಖ್ಯೆ–2.95 ಲಕ್ಷ.[3]

ಭಾರತ ಸರ್ಕಾರದ ರಾಷ್ಟ್ರೀಯ ಅಪರಾಧ ದಾಖಲೆ ಬ್ಯೂರೋದ ಇತ್ತೀಚಿನ ಅಂಕಿ–ಅಂಶಗಳ ಪ್ರಕಾರ 2007–17ರ ನಡುವಣ ಹತ್ತು ವರ್ಷಗಳ ಅವಧಿಯಲ್ಲಿ ದಲಿತರ ಮೇಲಿನ ದೌರ್ಜನ್ಯ ಪ್ರಮಾಣ ಶೇ.66ರಷ್ಟು

ಹೆಚ್ಚಾಗಿದೆ. ಪ್ರತಿನಿತ್ಯ 16 ನಿಮಿಷಕ್ಕೊಮ್ಮೆ ದಲಿತರ ವಿರುದ್ಧ ದೌರ್ಜನ್ಯ ನಡೆಸಲಾಗುತ್ತಿದೆ. ಪ್ರತಿವಾರಕ್ಕೆ 13 ದಲಿತರು ಮೇಲ್ಜಾತಿಯವರಿಂದ ಕೊಲೆಗೀಡಾಗುತ್ತಿದ್ದಾರೆ.

ಪರಿಶಿಷ್ಟರ ಮೇಲಿನ ದೌರ್ಜನ್ಯ ತಡೆ ಕಾಯಿದೆ ಅನುಷ್ಠಾನದ 2019ರ ವಾರ್ಷಿಕ ರಾಜ್ಯ ವರದಿ ಪ್ರಕಾರ ಕರ್ನಾಟಕದಲ್ಲಿ ಪ್ರತಿ ಐದು ದಿನಕ್ಕೊಬ್ಬ ದಲಿತ ವ್ಯಕ್ತಿಯ ಕೊಲೆಯಾದರೆ, 2 ದಿನಕ್ಕೊಂದು ದಲಿತ ಮಹಿಳೆಯ ಮೇಲೆ ಅತ್ಯಾಚಾರ ನಡೆಯುತ್ತಿದೆ. ಆದರೆ ಶಿಕ್ಷೆಯಾಗುತ್ತಿರುವ ಆರೋಪಿಗಳ ಪ್ರಮಾಣ ಬೆರಳೆಣಿಕೆ ಮಾತ್ರ ಎಂದು ತಿಳಿಸಲಾಗಿದೆ. ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದವರ ಮೇಲಿನ ದೌರ್ಜನ್ಯ ಪ್ರಕರಣಗಳ ಪ್ರಮಾಣ ಶೇ. 11.92ರಷ್ಟು ಹೆಚ್ಚಾಗಿವೆ. ಆದರೆ ಆರೋಪಿಗಳಿಗೆ ಶಿಕ್ಷೆಯಾಗುವ ಪ್ರಮಾಣ ಕೇವಲ ಶೇ. 3.79ರಷ್ಟು ಮಾತ್ರ. ಇತ್ತೀಚಿನ ವರ್ಷಗಳಲ್ಲಿ ಕೊಲೆ ಯತ್ನದ ಪ್ರಕರಣಗಳು ಕಡಿಮೆಯಾದರೂ, ಅತ್ಯಾಚಾರದ ಪ್ರಕರಣಗಳು ಮಾತ್ರ ಹೆಚ್ಚಾಗುತ್ತಲೇ ಇವೆ. ಕಳೆದ ವರ್ಷ 2,140 ದೌರ್ಜನ್ಯ ಪ್ರಕರಣಗಳು ದಾಖಲಾಗಿವೆ. ಇವುಗಳಲ್ಲಿ ಕೇವಲ 121 ಪ್ರಕರಣಗಳಲ್ಲಿ ತನಿಖೆ ನಡೆಯುತ್ತಿದೆ. ಉಳಿದವು ಇತ್ಯರ್ಥವಾಗಿಲ್ಲ. 375 ಪ್ರಕರಣಗಳಲ್ಲಿ ಬಿ ರಿಪೋರ್ಟ್ ಸಲ್ಲಿಕೆಯಾಗಿದೆ. ನ್ಯಾಯಾಲಯದ ಮೆಟ್ಟಿಲೇರಿದ ಪ್ರಕರಣಗಳ ಸಂಖ್ಯೆ ಕಳೆದ ವರ್ಷಕ್ಕಿಂತ ಈ ವರ್ಷ ಶೇ 29.57ರಷ್ಟು ಹೆಚ್ಚಾಗಿವೆ. ಬೆಂಗಳೂರು ನಗರದಲ್ಲಿಯೇ ಹೆಚ್ಚು ದೌರ್ಜನ್ಯಗಳು ದಾಖಲಾಗಿವೆ.

**ಕೋಷ್ಟಕ 1: ಬಳ್ಳಾರಿ ಜಿಲ್ಲೆಯ 2001–02 ರಲ್ಲಿ ಮಹಿಳೆಯರ ವಿರುದ್ಧದ ಅಪರಾಧ ದರ**

| ತಾಲೂಕು | ಒಟ್ಟು ಅಪರಾಧ ಪ್ರಕರಣಗಳ ದಾಖಲಾತಿ | ಮಹಿಳೆಯ ವಿರುದ್ಧ ಒಟ್ಟು ಅಪರಾಧ ಪ್ರಕರಣಗಳ ಸಂಖ್ಯೆ | ಮಹಿಳೆಯ ವಿರುದ್ಧದ ಪ್ರಕರಣಗಳ ಶೇಕಡಾವಾರು | ಪ್ರತಿ ಲಕ್ಷ ಮಹಿಳಾ ಜನಸಂಖ್ಯೆಗೆ ವರದಕ್ಷಿಣೆ ಸಾವು | ಆತ್ಮ ಹತ್ಯೆಗಳ ಒಟ್ಟು ಸಂಖ್ಯೆ | ಮಹಿಳಾ ಆತ್ಮಹತ್ಯೆಗಳ ಒಟ್ಟು ಪ್ರಕರಣಗಳ ಸಂಖ್ಯೆ | ಒಟ್ಟು ಶೇಕಡಾವಾರು ಮಹಿಳಾ ಆತ್ಮಹತ್ಯೆಗಳು |
|---|---|---|---|---|---|---|---|
| ಬಳ್ಳಾರಿ | 1125 | 39 | 3.46 | 2 | 113 | 48 | 42.47 |
| ಹಡಗಲಿ | 294 | 19 | 5.1 | – | 26 | 10 | 39 |
| ಹಗರಿಬೊಮ್ಮನಹಳ್ಳಿ | 167 | 14 | 23.38 | 1 | 23 | 6 | 1.38 |
| ಹೊಸಪೇಟೆ | 403 | 17 | 4 | – | 29 | 17 | 58.62 |
| ಕೂಡ್ಲಿಗಿ | 481 | 37 | 18 | – | 69 | 33 | 48 |
| ಸಂಡೂರು | 223 | 35 | 16 | – | 9 | 4 | 44.44 |
| ಸಿರುಗುಪ್ಪ | 280 | 18 | 6.42 | – | 34 | 11 | 32.35 |
| ಜಿಲ್ಲಾ ಒಟ್ಟು | 2973 | 175 | 5 | 3 | 303 | 129 | 43 |

**ಮೂಲ: ಪೊಲೀಸ್ ಇಲಾಖೆ, ಬಳ್ಳಾರಿ**

ಕೋಷ್ಟಕ 1 ರಲ್ಲಿ ತಿಳಿಸಿರುವಂತೆ ಬಳ್ಳಾರಿ ಜಿಲ್ಲೆಯಲ್ಲಿ 2001–02ರಲ್ಲಿ ನಡೆದಿರುವ ಅಪರಾಧದ ಪ್ರಕರಣಗಳನ್ನು ತಿಳಿಸುತ್ತದೆ. ಅದರಲ್ಲಿಯೂ ಬಳ್ಳಾರಿ ಮುಂದುವರಿದ ತಾಲೂಕಿನಲ್ಲಿ ಶೇ. 42.47ರಷ್ಟು ಪ್ರಕರಣಗಳು ಕಾಣಬಹುದು. ಅದೆ ರೀತಿ ಸಿರುಗುಪ್ಪ ತಾಲೂಕಿನಲ್ಲಿ 32.35ರಷ್ಟು ಪ್ರಕರಣಗಳನ್ನು ಕಾಣಬಹುದು.

**ಕೋಷ್ಟಕ 2: ಬಳ್ಳಾರಿ ಜಿಲ್ಲೆಯ 2011–12ರಲ್ಲಿ ಮಹಿಳೆಯರ ವಿರುದ್ಧದ ಅಪರಾಧ ದರ**

| ತಾಲೂಕು | ಒಟ್ಟು ಅಪರಾಧ ಪ್ರಕರಣಗಳ ದಾಖಲಾತಿ | ಮಹಿಳೆಯ ವಿರುದ್ಧ ಒಟ್ಟು ಅಪರಾಧ ಪ್ರಕರಣಗಳ ಸಂಖ್ಯೆ | ಮಹಿಳೆಯರ ವಿರುದ್ಧದ ಪ್ರಕರಣಗಳ ಶೇಕಡಾವಾರು | ಪ್ರತಿ ಲಕ್ಷ ಮಹಿಳಾ ಜನಸಂಖ್ಯೆಗೆ ವರದಕ್ಷಿಣೆ ಸಾವು | ಆತ್ಮ ಹತ್ಯೆಗಳ ಒಟ್ಟು ಸಂಖ್ಯೆ | ಮಹಿಳಾ ಆತ್ಮಹತ್ಯೆಗಳ ಒಟ್ಟು ಪ್ರಕರಣಗಳ ಸಂಖ್ಯೆ | ಒಟ್ಟು ಶೇಕಡಾವಾರು ಮಹಿಳಾ ಆತ್ಮ ಹತ್ಯೆಗಳು |
|---|---|---|---|---|---|---|---|
| ಬಳ್ಳಾರಿ | 2001 | 109 | 5.44 | 7 | 186 | 79 | 44 |
| ಹಡಗಲಿ | 204 | 19 | 9.31 | 1 | 15 | 9 | 42.36 |
| ಹಗರಿಬೊಮ್ಮನಹಳ್ಳಿ | 247 | 13 | 33.11 | 1 | 47 | 16 | 8 |
| ಹೊಸಪೇಟೆ | 578 | 48 | 8.3 | 2 | 51 | 17 | 33.33 |
| ಕೂಡ್ಲಿಗಿ | 396 | 22 | 5 | | 93 | 35 | 37 |
| ಸಂಡೂರು | 278 | 35 | 13 | | 40 | 10 | 25 |
| ಸಿರುಗುಪ್ಪ | 254 | 31 | 12.2 | 1 | 73 | 29 | 40 |
| **ಜಿಲ್ಲಾ ಒಟ್ಟು** | **3958** | **282** | **7.12** | **10** | **505** | **195** | **39** |

**ಮೂಲ: ಪೊಲೀಸ್ ಇಲಾಖೆ, ಬಳ್ಳಾರಿ**

ಕೋಷ್ಟಕ 2 ರಲ್ಲಿ ತಿಳಿಸಿರುವಂತೆ 2001ರ ಮಹಿಳಾ ಅಪರಾಧ ಪ್ರಕರಣಗಳಿಗೆ ನೋಡಿದಾಗ 2011ರ ಪ್ರಕರಣಗಳ ಸಂಖ್ಯೆ ಅಧಿಕವಾಗಿರುವುದನ್ನು ಗಮನಿಸಬಹುದಾಗಿದೆ. ರಾಷ್ಟ್ರೀಯ ಅಪರಾಧ ದಾಖಲೆಗಳ ಕಛೇರಿಯ ಪ್ರಕಾರ ದೇಶದಲ್ಲಿ ಪ್ರತಿ ನಿಮಿಷಕ್ಕೊಬ್ಬ ದಲಿತ ಮಹಿಳೆಯನ್ನು ಮಾನಭಂಗ ಮಾಡಲಾಗುತ್ತದೆ. ದೇಶದೆಲ್ಲೆಡೆ ದಲಿತರ ಬೆತ್ತಲೆ ಮೆರವಣಿಗೆಯಾಗುತ್ತಿದೆ. ದೇಶದೆಲ್ಲೆಡೆ: ಗ್ಯಾಂಗ್ರೇಪ್ ನಡೆಯುತ್ತಿದೆ. ದಲಿತರಿಗೆ ನ್ಯಾಯ ಮರೀಚಿಕೆಯಾಗಿದೆ. ಉತ್ತರ ಪ್ರದೇಶ, ಹಾಥರಸ್ ಮತ್ತು ಉನ್ನಾವೋದಲ್ಲಿ ದಲಿತ ಹೆಣ್ಣುಮಕ್ಕಳ ಮೇಲೆ ನಡೆದ ಘೋರವಾದ ಮಾನಭಂಗ ಮತ್ತು ಕೊಲೆಗಳು, ಅನಂತರ ಸರಕಾರ ನಡೆದುಕೊಂಡ ರೀತಿ–ನೀತಿ ಕಣ್ಣಾರೆ ಕಂಡೆವು. ರೈತ ಕಾರ್ಮಿಕರ ಹಕ್ಕುಗಳಿಗಾಗಿ ಹೋರಾಡುತ್ತಿರುವ ದಲಿತ ಮಹಿಳಾ ನಾಯಕಿ

ನವದೀಪ್ ಕೌರ್‌ರನ್ನು ಕ್ಷುಲ್ಲಕ ಕಾರಣ ನೀಡಿ ಬಂಧಿಸಿದ ಪೋಲಿಸರು "ನಿನ್ನ ಕೆಲಸ ಏನಿದ್ದರೂ ಚರಂಡಿ ಸ್ವಚ್ಛ ಮಾಡುವುದು" ಎಂದು ಕಸ್ಟಡಿಯಲ್ಲಿ ಅಸಭ್ಯವಾಗಿ ಮಾತನಾಡಿರುವುದು ಗಮನಿಸಿರಲಾದೀತೇ. ಇದೆಲ್ಲಾ ಜಾತೀಯತೆ ಅಲ್ಲದೇ ಮನುಷ್ಯತ್ವವೇ ಎಂದು ತಿಳಿಯಲಾಗಿದೆ.[4]

**ವರದಕ್ಷಿಣೆ ಕಿರುಕುಳ**

ಪ್ರಸ್ತುತ ದಿನಗಳಲ್ಲಿ ಮಹಿಳೆಯರನ್ನು ಅದರಲ್ಲೂ ದಲಿತ ಮಹಿಳೆಯರನ್ನು ಕಾಡುತ್ತಿರುವ ಸಮಸ್ಯೆಗಳು ಅನೇಕ ಅದರಲ್ಲೂ ವರದಕ್ಷಿಣೆಗಾಗಿ ಪೀಡಿಸುತ್ತಿರುವುದು, ಕಿರುಕುಳ ಕೊಡುವುದು, ಕೊಲೆ ಮಾಡುವುದು ಅಥವಾ ಕಿರುಕುಳ ತಾಳಲಾರದೆ ಅವರೇ ಆತ್ಮಹತ್ಯೆ ಮಾಡಿಕೊಳ್ಳುವ ದುಸ್ಥಿತಿಗೆ ತಳ್ಳುವುದು ಸರ್ವ ಸಾಮಾನ್ಯವಾಗಿದೆ.[5] ಭಾರತದಲ್ಲಿ ಸುಮಾರು 17ನೇ ಶತಮಾನದಿಂದ ಈಚೆಗೆ ಕಾಣಿಸಿಕೊಂಡ ದುಷ್ಟಪದ್ಧತಿಗಳಲ್ಲಿ ವರದಕ್ಷಿಣೆಯು ಒಂದು. ಇದು ಇನ್ನೂ ನಾಶವಾಗದೆ ಉಳಿದುಕೊ0ಡಿದೆ. ಸರ್ಕಾರದ ಯಾವುದೇ ಕಾನೂನಿಗೂ ಜಗ್ಗದ ಸಮಾಜಕ್ಕೆ ಅಂಟಿದ ಒಂದು ಶಾಪವಾಗಿದೆ.[6] ವರದಕ್ಷಿಣೆ ಪದ್ಧತಿ ಈ ಹಿಂದಿನ ಊಳಿಗಮಾನ್ಯ, ಪುರುಷ ಪ್ರಧಾನ ಸಮಾಜದ ಸಾಂಸ್ಕೃತಿಕ ಪಳೆಯುಳಿಕೆಯಾಗಿ ಉಳಿದಿದ್ದು ಇಂದಿನ ಪ್ರಜಾತಾಂತ್ರಿಕವೆನಿಸಿಕೊಂಡ ಸಮಾಜದಲ್ಲಿ ಇನ್ನೂ ಮುಂದುವರಿಯುತ್ತಲೇ ಇದೆ. ಅಷ್ಟೇ ಅಲ್ಲದೇ ಜಾಗತೀಕರಣ, ಖಾಸಗೀಕರಣ ತಂದಿರುವ ಕೊಳ್ಳುಬಾಕ ಸಂಸ್ಕೃತಿಯ ಈ ಯುಗದಲ್ಲಿ ಅದು ಒಂದು ಪತಾಕೆ ಪ್ರಮಾಣವನ್ನು ತಳೆದಿರುವುದನ್ನು ನಾವೆಲ್ಲರೂ ಒಪ್ಪಲೇಬೇಕು. ದಿನ ಪ್ರತಿ ಎಷ್ಟೋ ಹೆಣ್ಣುಮಕ್ಕಳ ಮೇಲಿನ ದೌರ್ಜನ್ಯಗಳಿಗೆ, ಆತ್ಮಹತ್ಯೆ, ಕೊಲೆಗಳಿಗೆ ಕಾರಣವಾಗಿದೆ. ವರದಕ್ಷಿಣೆ ತಡೆ ಕಾನೂನು ತಡೆ ಕಾನೂನು 1961ರ ಪ್ರಕಾರ ವರದಕ್ಷಿಣೆ ಕೊಡುವುದು, ಪಡೆಯುವುದು, ಕೇಳುವುದು, ಜಾಹೀರಾತು ನೀಡುವುದು, ಅಪರಾಧವಾದರೂ ಈ ದೇಶದಲ್ಲಿ ಇಂತಹ ಅನೇಕ ಕಾನೂನು ಉಲ್ಲಂಘನೆಗಳಂತೆ ಇದು ಸಹ ತೆರೆಮರೆಯ ಹಿಂದೆ ನಡೆಯುತ್ತಲೇ ಇದೆ.[7] ಭಾರತದಲ್ಲಿ ಸಾಮಾಜಿಕವಾಗಿ ಭಯಂಕರವಾದ ಪಿಡುಗು ಎಂದರೆ ವರದಕ್ಷಿಣೆ. ಸಮಾಜದ ಪ್ರತಿ ವರ್ಗಗಳ ಜನರನ್ನು ಕಬಳಿಸುತ್ತಿರುವುದು ನಿಜಕ್ಕೂ ದಾರುಣ. ಮಾನವನ ದುರಾಸೆಯಿಂದಾಗಿ ವರದಕ್ಷಿಣೆಯು ಅನೇಕ ಮುಗ್ಧ ಯುವತಿಯರ ಮೇಲಿನ ದೌರ್ಜನ್ಯಕ್ಕೆ, ಅವರ ಅತ್ಮಹತ್ಯೆಗೆ ಅಲ್ಲದೇ ಕೊಲೆಗೂ ಸಹ ಕಾರಣವಾಗಿ ಪರಿಣಮಿಸಿದೆ. ಇತ್ತೀಚಿನ ದಿನಗಳಲ್ಲಿ ಬಡವರು ಅತ್ಯಾಚಾರ, ದೌರ್ಜನ್ಯ, ವರದಕ್ಷಿಣೆ ಸಾವು, ಗೃಹಕೃತ್ಯ ಹಿಂಸಾಚಾರ, ಲೈಂಗಿಕ ಹಿಂಸೆ, ಹೆಣ್ಣುಮಕ್ಕಳ ಅಪಹರಣ, ಕಿರುಕುಳ, ಹಲ್ಲೆ, ಅವಮಾನ, ದಬ್ಬಾಳಿಕೆ, ಕ್ರೌರ್ಯ, ಇತ್ಯಾದಿಗಳು ಮಹಿಳೆಯರ ವಿರುದ್ಧ ನಡೆಯುತ್ತಲೇ ಇವೆ. ವರ್ಷಗಳು ಉರುಳಿದಂತೆ ಇಂತಹ ಅಪರಾಧ ಪ್ರಕರಣಗಳು ಹೆಚ್ಚುತ್ತಿರುವುದು ನಿಜಕ್ಕೂ ಆತಂಕಕಾರಿಯಾಗಿದೆ. ಹುಟ್ಟಿನಿಂದಲೇ ಲಿಂಗತಾರತಮ್ಯಗಳಾಗುವ ಹೆಣ್ಣು ದೌರ್ಜನ್ಯಗಳನ್ನು ಸಹಿಸಿಯೇ ಬದುಕಬೇಕಾಗಿದೆ. ಪ್ರತಿನಿತ್ಯ ಪತ್ರಿಕೆಗಳಲ್ಲಿ ವರದಿಯಾಗುವ ಇಂತಹ ಪ್ರಕರಣಗಳಲ್ಲಿ 90ರಷ್ಟು ಹೆಣ್ಣುಮಕ್ಕಳು ಬಡಕುಟುಂಬದಿಂದ ಬಂದವರಾಗಿರುತ್ತಾರೆ. ಇಂದು ಕುಸಿಯುತ್ತಿರುವ ಸಾಮಾಜಿಕ ಮೌಲ್ಯಗಳು ಹದಗೆಡುತ್ತಿರುವ ಪರಿಸರ, ಮಾಧ್ಯಮಗಳಲ್ಲಿ ಪ್ರಸಾರವಾಗುತ್ತಿರುವ ಅಶ್ಲೀಲ ದೃಶ್ಯಗಳು ಜನರ ಮನಸ್ಸನ್ನು ಪ್ರಚೋದಿಸುತ್ತವೆ. ಇದರ ಪರಿಣಾಮವಾಗಿ ಅತ್ಯಾಚಾರ ದೌರ್ಜನ್ಯದ ಪ್ರಕರಣಗಳು ಹೆಚ್ಚುತ್ತಿವೆ.[8]

**ದಲಿತ ಮಹಿಳೆಯರ ಮೇಲಿನ ದೌರ್ಜನ್ಯಗಳು**

ಮಹಿಳೆಯ ಮೇಲಿನ ಹಿಂಸಾಚಾರ ಅತ್ಯಂತ ನಾಚಿಕೆಗೇಡಿನ ಸಂಗತಿ. ಮಾನವ ಹಕ್ಕಿನ ಸ್ಪಷ್ಟ ಉಲ್ಲಂಘನೆ ಆದರೆ ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯಕ್ಕೆ ಭೌಗೋಳಿಕ, ಸಾಂಸ್ಕೃತಿಕ, ಬಡವ, ಶ್ರೀಮಂತ ಎನ್ನುವ ಯಾವುದೇ ಎಲ್ಲೆಗಳಿಲ್ಲ. ಇದು ಮುಂದುವರಿಯುವವರೆಗೂ ನಿಜವಾದ ಪ್ರಗತಿ ಸಾಧ್ಯವಿಲ್ಲ. ಸಮಾನತೆ, ಅಭಿವೃದ್ಧಿ ಮತ್ತು ಶಾಂತಿ ಸ್ಥಾಪಿಸಲು ಸಾಧ್ಯವಿಲ್ಲ ಎಂದು ಕೋಫಿ ಅನ್ನಾನ್(ವಿಶ್ವಸಂಸ್ಥೆಯ ಮಹಾ ಪ್ರಧಾನ ಕಾರ್ಯದರ್ಶಿ) ಅಭಿಪ್ರಾಯವಾಗಿದೆ. ದಲಿತ ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯದ ಬಗ್ಗೆ ಇತ್ತೀಚೆಗೆ ನಡೆಸಲಾದ ಸಮೀಕ್ಷೆಗಳು ಅತ್ಯಂತ ಅಚ್ಚರಿಯ ಫಲಿತಾಂಶಗಳನ್ನು ಪ್ರಕಟಿಸಿದೆ. 1996ರಲ್ಲಿ ದೇಶದಲ್ಲಿ ಅತ್ಯಾಚಾರ, ಅಪಹರಣ, ವರದಕ್ಷಿಣೆ ಸಾವು, ಹಿಂಸೆ, ಕಿರುಕುಳ ಬಗ್ಗೆ 1,15,723 ಪ್ರಕರಣಗಳು ನಡೆದಿವೆ. ಅದೇ ರೀತಿ 1997ರಲ್ಲಿ 1,21,265, 1998ರಲ್ಲಿ 1,31,475 1999ರಲ್ಲಿ 1,35,771 2000ರಲ್ಲಿ 1,41,373 ಮತ್ತು 2001ರಲ್ಲಿ 1,43,795 ಪ್ರಕರಣಗಳು ನಡೆದಿವೆ.[9] ಎನ್.ಸಿ.ಆರ್.ಬಿ ಅಂಕಿ–ಅಂಶಗಳ ಪ್ರಕಾರ 2010–2019ರ ಅವಧಿಯಲ್ಲಿ ಭಾರತದಾದ್ಯಂತ ಒಟ್ಟು 3,13,289 ಪ್ರಕರಣಗಳು ವರದಿಯಾಗಿವೆ.[10]

ಪ್ರತಿ ವರ್ಷ ನವೆಂಬರ್ 25 ಅಂತಾರಾಷ್ಟ್ರೀಯ ಮಹಿಳಾ ದೌರ್ಜನ್ಯ ವಿರೋಧಿ ದಿನವನ್ನು ಆಚರಿಸಲಾಗುತ್ತಿದೆಯಾದರೂ ಕರ್ನಾಟಕದಲ್ಲಿ ಪ್ರತಿ ವರ್ಷ ಸರಾಸರಿ 6,000 ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳು ದಾಖಲಾಗುತ್ತಿವೆ. ವರದಕ್ಷಿಣೆಗೆ ಬಲಿಯಾಗುವವರ ಸಂಖ್ಯೆ ವಾರ್ಷಿಕ ಸರಾಸರಿ 194, ವರದಕ್ಷಿಣೆಗಾಗಿ ದೈಹಿಕ ಹಿಂಸೆ ನೀಡಿದ ಪ್ರಕರಣಗಳು ಸರಾಸರಿ 1585, ಅತ್ಯಾಚಾರ ಪ್ರಕರಣಗಳು 321, ಅಪಹರಣ ಪ್ರಕರಣಗಳು 531, ದೈಹಿಕ ಹಿಂಸೆಯು 1700, ವೇಶ್ಯಾವೃತ್ತಿಯ 1361 ಪ್ರಕರಣಗಳು ದಾಖಲಾಗಿವೆ. 2004ರಲ್ಲಿ 25 ಮಕ್ಕಳ ಮೇಲಿನ ಅತ್ಯಾಚಾರ ನಡೆದಿದ್ದು, 24 ಅಪಹರಣ ಪ್ರಕರಣಗಳು ನಡೆದಿವೆ. ಬೆಂಗಳೂರು ಗ್ರಾಮಾಂತರ ಜಿಲ್ಲೆ ರಾಜ್ಯದಲ್ಲಿಯೇ ಶೇ.20ರಷ್ಟು ದೌರ್ಜನ್ಯಕ್ಕೆ ಒಳಗಾಗಿದ್ದು ಅತ್ಯಧಿಕ ಸ್ಥಾನದಲ್ಲಿದೆ.[11]

ಯುನಿಸೆಫೆಮ್(ಯು.ಎನ್.ಐ.ಎಫ್.ಈ.ಎಮ್.) ಹಾಗೂ ಹೆಲ್ತ್ ಮೈಂಟೆನೆನ್ಸ್ ಆರ್ಗನೈಸೇಷನ್‌ನ ಸಮೀಕ್ಷೆಗಳ ಪ್ರಕಾರ ದೈಹಿಕ ಹಾಗೂ ಮಾನಸಿಕ ಒತ್ತಡಗಳಿಗೆ ಒಳಪಟ್ಟಿರುವ ದಲಿತ ಮಹಿಳೆಯರು ಯಾವುದೇ ಶ್ರಮಾಧಾರಿತ ಕೆಲಸಗಳಾಗಲಿ ಅಥವಾ ಸೃಜನಾತ್ಮಕ ಚಿಂತನೆಗಳಲ್ಲಾಗಲಿ ತಮ್ಮನ್ನೇ ಸಂಪೂರ್ಣವಾಗಿ ತೊಡಗಿಸಿಕೊಳ್ಳಲು ಸಾಧ್ಯವಾಗಿಲ್ಲ. ಅನೇಕ ಬಾರಿ ದೌರ್ಜನ್ಯಗಳು ಗಂಭೀರ ದೈಹಿಕ ಸಮಸ್ಯೆಗಳಿಗೆ ಎಡೆ ಮಾಡಿಕೊಡುತ್ತದೆ. ಇಡೀ ವಿಶ್ವದಾದ್ಯಂತ ಪ್ರತಿ ಮೂರು ಹೆಣ್ಣುಮಕ್ಕಳಲ್ಲಿ ಕನಿಷ್ಠ ಒಬ್ಬಳು ಹೊಡೆಯಲ್ಪಟ್ಟಿದ್ದಾಳೆ. ಜೀವನ ಪರ್ಯಂತ ದೌರ್ಜನ್ಯಕ್ಕೆ ಒಳಪಟ್ಟಿದ್ದಾಳೆ. ಅನೇಕ ಸಂದರ್ಭಗಳಲ್ಲಿ ದೌರ್ಜನ್ಯ ಮಾಡುವವನು ಕುಟುಂಬದ ಸದಸ್ಯನೇ ಆಗಿರುತ್ತಾನೆ. ಈಗೀಗ ದೌರ್ಜನ್ಯವನ್ನು ಒಂದು ಸಾರ್ವಜನಿಕ ಆರೋಗ್ಯದ ಪ್ರಶ್ನೆಯಾಗಿ ಹಾಗೂ ಮಾನವ ಹಕ್ಕುಗಳ ಉಲ್ಲಂಘನೆಯಾಗಿ ಪರಿಗಣಿಸಲಾಗುತ್ತದೆ(ಜನಸಂಖ್ಯೆ ವರದಿ). ಒಟ್ಟಾರೆ ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಎರಡು ಪ್ರಮುಖ ಕಾರ್ಯಗಳಾಗಬೇಕಾಗಿವೆ. ಒಂದು ಅಪರಾಧಿಗಳಿಗೆ ಕಠಿಣ ಶಿಕ್ಷೆ ವಿಧಿಸಬೇಕೆಂದು ಒತ್ತಾಯಿಸಿ ಎಲ್ಲ ಜನಸಾಮಾನ್ಯರನ್ನೊಳಗೊಂಡ ಬೃಹತ್ ಹೋರಾಟವನ್ನು ಬೆಳೆಸುವುದು. ಮತ್ತೊಂದು ಮಹಿಳೆಯು

ಪುರುಷನಷ್ಟೇ ಸಮಾನಳು, ಸಾಮರ್ಥ್ಯವನ್ನು ಹೊಂದಿರುವಳು, ಎಲ್ಲ ಕ್ಷೇತ್ರಗಳಲ್ಲೂ ಸರಿಸಮಾನವಾಗಿ ಕೊಡುಗೆಯನ್ನು ನೀಡಬಲ್ಲಳು. ಸಮಾಜದ ಅರ್ಧಭಾಗವಾಗಿರುವ ಮಹಿಳೆಯರನ್ನು ಹಿಂದೆ ಯಾವುದೇ ಸಮಾಜವು ಮುನ್ನಡೆಯಲು ಸಾಧ್ಯವಿಲ್ಲ ಎಂಬ ಪರಿಕಲ್ಪನೆಗಳನ್ನು ಸ್ಥಾಪಿಸಲು ಸಾಮಾಜಿಕ ಆಂದೋಲನವನ್ನು ಬೆಳಸುವುದು.[12]

ಅಪರಾಧಗಳ ದಾಖಲೆಗಳ ಕಚೇರಿ, ಗೃಹಸಚಿವಾಲಯ, ಭಾರತ ಸರ್ಕಾರ, ನವದೆಹಲಿ ರವರ ಪ್ರಕಾರ ಕೆಳಗಿನ ಅಂಶಗಳನ್ನು ಅವಲೋಕಿಸಿದಾಗ ಆಘಾತವನ್ನುಂಟು ಮಾಡುತ್ತದೆ.

ಪ್ರತಿ 54 ನಿಮಿಷಗಳಿಗೊಮ್ಮೆ 1 ಮಾನಭಂಗ ಪ್ರಕರಣ
ಪ್ರತಿ 26 ನಿಮಿಷಗಳಿಗೊಮ್ಮೆ 1 ಹಿಂಸೆಯ ಕೃತ್ಯ
ಪ್ರತಿ 43 ನಿಮಿಷಗಳಿಗೊಮ್ಮೆ 1 ಅಪಹರಣ/ಬಲಾತ್ಕಾರ ಪ್ರಕರಣ
ಪ್ರತಿ 51 ನಿಮಿಷಗಳಿಗೊಮ್ಮೆ ಮಹಿಳೆಯರಿಗೆ ಕಿರುಕುಳ ಪ್ರಕರಣ
ಪ್ರತಿ 1 ಗಂಟೆ, 42 ನಿಮಿಷಗಳಿಗೊಮ್ಮೆ 1 ವರದಕ್ಷಿಣೆ ಸಾವು
ಪ್ರತಿ 33 ನಿಮಿಷಗಳಿಗೊಮ್ಮೆ 1 ಕ್ರೌರ್ಯದ ಕೃತ್ಯ
ಪ್ರತಿ 7 ನಿಮಿಷಗಳಿಗೊಮ್ಮೆ ಮಹಿಳೆಯರ ವಿರುದ್ಧ 1 ಅಪರಾಧ

ಈ ಅನಿಷ್ಟ ಪದ್ಧತಿಯನ್ನು ತಡೆಗಟ್ಟುವ ಸಲುವಾಗಿ 1961ರಲ್ಲಿ ವರದಕ್ಷಿಣೆ ನಿಷೇದ ಕಾನೂನು ಜಾರಿಗೆ ತಂದರೂ ದುರುಪಯೋಗವಾಗುತ್ತಿದೆ.[13]

ನಗರ ಅಥವಾ ಗ್ರಾಮೀಣ ಪ್ರದೇಶದಲ್ಲಾಗಲೀ ದಲಿತ ಮಹಿಳೆಯರಿಗೆ ಸಮಾನ ಅವಕಾಶ ಮತ್ತು ಸಮಾನತೆ ದೊರೆತಿಲ್ಲ. 800 ವರ್ಷಗಳ ಹಿಂದೆಯೇ ಸಮಾಜ ಸುಧಾರಕರು ಮಹಿಳೆಯರ ಮೇಲಿನ ದೌರ್ಜನ್ಯದ ಬಗ್ಗೆ ಧ್ವನಿ ಎತ್ತಿದ್ದಾರೆ. ಆದರೂ ಈ ಸಮಸ್ಯೆ ಇನ್ನೂ ಜೀವಂತವಾಗಿದೆ. ಮಹಿಳೆಯರ ಮೇಲಿನ ದೌರ್ಜನ್ಯ ಅಥವಾ ಅಪರಾಧದ ಬಗ್ಗೆ ಭಾವನಾತ್ಮಕವಾಗಿ ಅಥವಾ ಇನ್ನಾವುದೋ ನೆಲೆಯಲ್ಲಿ ನಿಂತು ಮಾತನಾಡುವ ಬದಲು ವಾಸ್ತವ ನೆಲೆಯಲ್ಲಿ ನಿಂತು ಹೆಚ್ಚು ಎಚ್ಚರ ವಹಿಸುವ ಅಗತ್ಯವಿದೆ. ಅಲ್ಲದೆ ಈ ವಿಷಯದಲ್ಲಿ ರಾಜಕೀಯ ಸಲ್ಲದು ಈ ಬಗ್ಗೆ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿಯೂ ಹೆಚ್ಚಿನ ರೀತಿಯಲ್ಲಿ ಅರಿವು ಮೂಡಿಸಬೇಕು.[14]

ಭಾರತೀಯ ಸಮಾಜದಲ್ಲಿ ತೀವ್ರ ಸ್ವರೂಪದ ಅಸಮಾನತೆಗಳನ್ನು ಸೃಷ್ಟಿಸಿರುವ ವ್ಯವಸ್ಥೆಯೆಂದರೆ ಜಾತಿ. ಜಾತಿ ಎನ್ನುವುದು ಒಂದು ಶ್ರೇಣೀಕೃತ ವ್ಯವಸ್ಥೆ ಮಹಿಳೆಯರು ಒಗ್ಗಟ್ಟಾಗಿ ತಮ್ಮ ಅಭಿವೃದ್ಧಿ ಹಾಗೂ ಸಮಾನತೆಗಾಗಿ ಹೋರಾಡಲು ಜಾತಿವ್ಯವಸ್ಥೆ ಅನೇಕ ಸಂದರ್ಭಗಳಲ್ಲಿ ಅಡ್ಡಿ ಬಂದಿದೆ. ಅಲ್ಲದೆ ಮೇಲಿನ ಜಾತಿಗೆ ಸೇರಿದ ಅನೇಕ ಮಹಿಳೆಯರು ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ತಮಗಿಂತ ಕೆಳಜಾತಿಗಳಲ್ಲಿರುವ ಮಹಿಳೆಯರನ್ನು ತಮ್ಮ ಸಮಾನರಂತೆ ಪರಿಗಣಿಸುವುದಿಲ್ಲ. ಇಂದು ಜಾತಿ ತನ್ನ ಕೆನ್ನಾಲಿಗೆಯನ್ನು ಎಲ್ಲೆಡೆ ಚಾಚುತ್ತಿದೆ. ಪ್ರತಿ ಜಾತಿಯು ತನ್ನ ಜಾತಿ ಸ್ಥಾನವನ್ನು, ಜಾತಿ ಅಂಕಿತವನ್ನು ಹೇಗಾದರೂ ಮಾಡಿ ಕಾಪಾಡಿಕೊಳ್ಳಬೇಕೆಂಬ ಉದ್ದೇಶದಿಂದ ಸಂಘಟನೆಗಳನ್ನು ಸ್ಥಾಪಿಸಲು ಹೊರಟಿವೆ. ಜಾತಿ–ಜಾತಿಗಳ ನಡುವೆ ಇಂತಹ ಸಂಘಟನೆಗಳು ಅಂತರವನ್ನು ಸೃಷ್ಟಿಸಿದರೆ, ಆ ಜಾತಿಯ ಒಳಗಡೆಯೇ

ಪರುಷರು ಮತ್ತು ದಲಿತ ಮಹಿಳೆಯರ ನಡುವೆ ಈಗಾಗಲೇ ಅಸ್ತಿತ್ವದಲ್ಲಿರುವಂತಹ ಲಿಂಗಭೇದವನ್ನು ಮತ್ತಷ್ಟು ಬಲಗೊಳಿಸುತ್ತವೆ.[15]

ಭಾರತದಲ್ಲಿ ಜಾತಿಯು ಅತಿ ಪುರಾತನವಾದ ಸಾಮಾಜಿಕ ವ್ಯವಸ್ಥೆಯಾಗಿದೆ. ಇಂದೂ ಜೀವನದ ಪ್ರತಿಯೊಂದು ಅಂಶದ ಮೇಲೂ ಅದು ಪ್ರಭಾವಬೀರುತ್ತದೆ. ಆಹಾರ, ಉಡುಪು, ವೃತ್ತಿ, ಕುಟುಂಬ ಸ್ವರೂಪ, ವಿವಾಹ, ಸಂಪ್ರದಾಯ, ಮತಧರ್ಮ ಇತ್ಯಾದಿಗಳ ಮೇಲೆ ಆಳವಾಗಿ ಬೇರೂರಿದೆ. ಒಂದು ಪ್ರಧಾನ ಜಾತಿಯಲ್ಲಿ ನೂರಾರು ಉಪಜಾತಿಗಳು ಹುಟ್ಟಿಕೊಂಡಿವೆ. ಕೆಲವು ಜಾತಿಗಳು ವಿಶೇಷ ಸವಲತ್ತುಗಳನ್ನು ಅನುಭವಿಸಿದರೆ ಮತ್ತೆ ಕೆಲವು ಜಾತಿಗಳು ಅಪಮಾನಗಳನ್ನು ಅನುಭವಿಸುತ್ತಿದ್ದಾರೆ. ಇವುಗಳಿಂದ ಮಹಿಳೆಯರ ಸ್ಥಿತಿಗಳೂ ಚಿಂತಾಜನಕ ಸ್ಥಿತಿಯಲ್ಲಿವೆ. ಬಹುತೇಕ ಜಾತಿಗಳು ಶೋಷಿತ ವರ್ಗಗಳ ಗುಂಪಿಗೆ ಸೇರಿದ ದಲಿತ, ಹಿಂದುಳಿದ ಜಾತಿಗಳ ಮಹಿಳೆಯರು ಸಾಮಾಜಿಕ, ಆರ್ಥಿಕ, ಸೌಲಭ್ಯಗಳಿಂದ ವಂಚಿತರಾಗಿದ್ದಾರೆ ಹಾಗೂ ಲೈಂಗಿಕ ಕಿರುಕುಳಕ್ಕೆ ಒಳಗಾಗುತ್ತಿದ್ದಾರೆ. ಇದಕ್ಕೆ ಉನ್ನತ ಜಾತಿಗಳ ಪ್ರಭಾವವು ಹೆಚ್ಚಾಗಿರುವುದರಿಂದ ಕೆಳವರ್ಗದ ಜಾತಿಯ ಅಥವಾ ದಲಿತ ಮಹಿಳೆಯರು ಹೆಚ್ಚಾಗಿ ಶೋಷಣೆಗೆ ಒಳಗಾಗುತ್ತಿದ್ದಾರೆ.[16]

**ಕೊನೆ ಟಿಪ್ಪಣಿಗಳು**

1. ಸ್ತ್ರೀಮುಕ್ತಿ. (2003, ಮಾರ್ಚ್). *ದೌರ್ಜನ್ಯಗಳ ವಿರುದ್ಧ ಸಿಡಿದೆದ್ದ ನಾರೀ ಸಮುದಾಯ.* ಪುಟ–19
2. ಲೀನಾ ಮೆಹಂದಲೆ. (2002, ಜೂನ್). ಮಹಿಳೆಯರ ವಿರುದ್ಧ ಅಪರಾಧಗಳು. *ಯೋಜನಾ ಮಾಸ ಪತ್ರಿಕೆ.* ಪುಟ.2–5
3. ರಮೇಶ್ ವಿ. (2021, ಜೂನ್ 6). ಕೊರೊನಾ ಕಾಲದಲ್ಲೂ ದಲಿತರ ದಮನ ನಿಲ್ಲಲಿಲ್ಲ. *ವಾರ್ತಾಭಾರತಿ.* ಪುಟ–1, 3
4. ಲೀನಾ ಮೆಹಂದಲೆ. (2002, ಜೂನ್). *ಪೂರ್ವೋಕ್ತ.* ಪುಟ. 5
5. ರಮೇಶ್ ವಿ. (2021, ಜೂನ್ 6). *ಪೂರ್ವೋಕ್ತ.* ಪುಟ. 4
6. ಸ್ತ್ರೀಮುಕ್ತಿ. (2003, ಮಾರ್ಚ್). ವರದಕ್ಷಿಣೆ ವಿರೋಧಿ–ಹೋರಾಟದ ರೂವಾರಿ. *ಸ್ತ್ರೀಮುಕ್ತಿ.* ಪುಟ–7
7. ರಫಿಕ್ ಎಂ.ಆರ್. ಮತ್ತು ಕೋಣಾಜೆ. (2003, ಜುಲೈ 1). ಸ್ತ್ರೀಶೋಷಣೆ ಅರಣ್ಯರೋಧನವೇ?. *ಜನವಾಹಿನಿ.* ಪುಟ. 6
8. ಸ್ತ್ರೀಮುಕ್ತಿ. (2003, ಸೆಪ್ಟೆಂಬರ್). ವರದಕ್ಷಿಣೆ ಕಾನೂನು ದುರ್ಬಳಕೆವಾದ– ಖಂಡನ ಯೋಗ್ಯ. *ಸ್ತ್ರೀಮುಕ್ತಿ.* ಪುಟ–5
9. ಇಂದಿರಾ, ಆರ್. (1995). *ಭಾರತೀಯ ಸಮಾಜ.* ಕನ್ನಡ ಪುಸ್ತಕ ಪ್ರಾಧಿಕಾರ. ಪುಟ. 102
10. ರವೀಂದ್ರಭಟ್ಟ ಐನಕೈ. (2004, ಜುಲೈ). ಮಹಿಳೆಯರ ಮೇಲಿನ ಹಿಂಸಾಚಾರಕ್ಕೆ ಕೊನೆಯಿಲ್ಲವೇ?. *ಪ್ರಜಾವಾಣಿ.* ಪುಟ–5
11. ಭಾರತದಲ್ಲಿ ಗಂಟೆಗೆ ನಾಲ್ಕು ಅತ್ಯಾಚಾರ: ಸ್ತ್ರೀಯರಿಗೆ ರಕ್ಷಣೆ ಸಿಗೋದು ಯಾವಾಗ?. (2020, ಅಕ್ಟೋಬರ್ 1). *ಈ ಟಿವಿ ಭಾರತ್ ವಾರ್ತೆ.* ಪುಟ. 4–5

12. ಸ್ತ್ರೀಮುಕ್ತಿ. (2003, ಸೆಪ್ಟೆಂಬರ್). ಮಹಿಳೆಯರ ಮೇಲಿನ ದೌರ್ಜನ್ಯಗಳಿಗೆ ಧಿಕ್ಕಾರ. *ಪುಟ–17*
13. ಅದೇ, ಪುಟ–18
14. ಚತುರ್ವೇದಿ, ಟಿ.ಎನ್. (2004, ಅಕ್ಟೋಬರ್ 8). ಮಹಿಳೆಯರ ಮೇಲಿನ ದೌರ್ಜನ್ಯ ಅಭಿವೃದ್ಧಿಗೆ ಮಾರಾಟ. *ಉದಯವಾಣಿ ದಿನಪತ್ರಿಕೆ.* ಪುಟ.5
15. ಇಂದಿರಾ, ಆರ್. (1995). ಪೂರ್ವೋಕ್ತ. ಪುಟ. 99–115
16. ಕೃಷ್ಣ ಬಿ.ಆರ್. *ಸಮಾಜಶಾಸ್ತ್ರ.* ಚಾಮರಾಜಪೇಟೆ.